ಅಸಲು ದಾವಾ ನಂ. 175 /2017
ಪಿ ಡಬ್ಲ್ಯು-1

ಮಧ್ಯಂತರ ಅಆಜಿ ನಂ.16 ರ ಮೇಲಿನ ದಿನಾಂಕ 29.03.2025 ರ ಆದೇಶದ ಮೇರೆಗೆ ಸಾಕ್ಷಿಯನ್ನು 2,000/- ರೂ ಖರ್ಚಿನೊಂದಿಗೆ ಪುನಃ ಸಾಕ್ಷ್ಯ ನುಡಿಯಲು ಕರೆ ಕಳಿಸಿದ್ದು ಇರುತ್ತದೆ.

ದಿನಾಂಕಃ 20.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದು ವರೆದ ಪಾಟೀಸವಾಲುಃ- ಪ್ರತಿವಾದಿ ಪರ ಶ್ರೀ ಪಿ.ಕೆ.ಕೆ ವಕೀಲರಿಂದ.**

2010 ನೇ ಸಾಲೀನಲ್ಲಿ ಒಂದು ಎಕರೆ ಜಮೀನಿನ ಮಾರುಕಟ್ಟೆ ಬೆಲೆ 4 ಲಕ್ಷ ರೂಪಯಿಗಳಷ್ಟು ಇತ್ತು ಎಂದರೆ ಸರಿಯಲ್ಲ. ಈಗ 2025 ರಲ್ಲಿ ಒಂದು ಎಕರೆ ಜಮೀನಿನ ಮಾರುಕಟ್ಟೆ ಬೆಲೆ 15 ಲಕ್ಷಗಳಷ್ಟು ಆಗುತ್ತದೆ ಎಂದರೆ ಇರಬಹುದು. ಈ ದಾವೆಯಲ್ಲಿ ಪ್ರತಿವಾದಿಯರು ನನ್ನ ಖಾತೆಯ ವರದಿಯನ್ನು ಹಾಜರುಪಡಿಸುವಂತೆ ಅರ್ಜಿಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಪರ ವಕೀಲರು ಹಾಗೆ ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಹೇಳಿಲ್ಲ. ಆಗ ನಾನು ಪಂಚರ ಸಮಕ್ಷಮ ಸಮಾಲೋಚಿಸಿ ಈ ನ್ಯಾಯಾಲಯಕ್ಕೆ ನನ್ನ ಪರವಾಗಿ ಹಣ ಜಮೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಆಧರಿಸುತ್ತಿರುವ ಖರೀದಿ ಕರಾರು ಪತ್ರ ಮತ್ತು ಭರಪಾಯಿ ಪತ್ರ ನನ್ನ ಹೆಸರಿಗೆ ಬರೆದುಕೊಟ್ಟ ಪತ್ರಗಳು ಅಲ್ಲ ಅವು ಪಂಚರು ನನ್ನ ಹೆಸರಿಗೆ ಸೃಷ್ಟಿಸಿದ ಪತ್ರಗಳು ಎಂದರೆ ಸರಿಯಲ್ಲ. ಹಾಗೆ ಪಂಚರು ನನ್ನ ಮೂಲಕ ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಆಸ್ತಿ ನನ್ನ ಹೆಸರಿಗೆ ಆದ ನಂತರ ಅದನ್ನು ನನ್ನ ಮೂಲಕ ಮಾರಾಟ ಮಾಡಿ ಬಂದ ಪ್ರತಿಫಲದ ಹಣವನ್ನು ಎಲ್ಲರೂ ಹಂಚಿಕೊಳ್ಳುವ ದುರುದ್ದೇಶ ಹೊಂದಿದ್ದಾರೆ ಎಂದರೆ ಸರಿಯಲ್ಲ. ನನಗೆ ಸದರಿ ಪಂಚರು ತಾವು ಮುಂದೆ ಬಂದು ನ್ಯಾಯಾಲಯಕ್ಕೆ ನನ್ನ ಪರವಾಗಿ ಸಾಕ್ಷ್ಯ ನುಡಿಯುವ ಭರವಸೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ಪಂಚ ಜನರು ಮಿಲಾಪಿಯಾಗಿ ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ಪ್ರತಿವಾದಿಯರ ವಿರುದ್ಧ ಸಲ್ಲಿಸಿದ ಖೊಟ್ಟಿ ದಾವೆ ಎಂದರೆ ಸರಿಯಲ್ಲ. ನಾನು ಆಧರಿಸುವ ಖರೀದಿ ಕರಾರು ಪತ್ರ ಮತ್ತು ಭರಪಾಯಿ ಪತ್ರ ನಿಜವಾದ ಸಾಚಾ ಪತ್ರಗಳು ಅಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ ನಂ. 175 /2017
ಪಿ ಡಬ್ಲ್ಯು-1

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).